# ಸ್ವಾಧ್ಯಾಯ

ಮೂಲ ಹಿಂದೀ : ಸ್ವಾಮಿ ಬ್ರಹ್ಮೇಶಾನಂದ ಅನುವಾದ: ಮಾತಾ ತ್ಯಾಗಮಯೀ

ಕ್ರಿಯಾಯೋಗದ ೨ನೆ ಅಂಗ ಸ್ವಾಧ್ಯಾಯ. ಎಲ್ಲ ಧರ್ಮಗಳು ಶಾಸ್ತ್ರಗಳ ಅಥವಾ ಸದ್ಗ್ರಂಥಗಳ ಪಠಣ-ಪಾಠಣ ಮತ್ತು ಶ್ರವಣಕ್ಕೆ ಮಹತ್ವವನ್ನು ನೀಡಿವೆ. ಧ್ಯಾನ-ಜಪದೊಂದಿಗೆ ನಿಯಮಿತ ಸ್ವಾಧ್ಯಾಯವೂ ಸಾಧನೆಯ ಅನಿವಾರ್ಯ ಅಂಗವಾಗಿದೆ. ಸ್ವಾಧ್ಯಾಯ ಮತ್ತು ತಪಸ್ಸಿನ ಅಭಾವದಿಂದ ಧರ್ಮಸಂಸ್ಥೆಗಳು ನಾಶವನ್ನಪ್ಪುತ್ತವೆ ಎಂಬುದು ಸ್ವಾಮಿ ವಿವೇಕಾನಂದರ ಅಭಿಪ್ರಾಯ. ಆಧ್ಯಾತ್ಮಿಕ ಜೀವನಕ್ಕೆ ಅತ್ಯಂತ ಆವಶ್ಯಕವಾದ ಸಾಧುಸಂಗವು ಅಷ್ಟು ಸುಲಭವಾಗಿ ಸಿಗುವಂಥದಲ್ಲ. ಸ್ವಾಧ್ಯಾಯವು ಆ ಕೊರತೆಯನ್ನು ಭರ್ತಿ ಮಾಡುತ್ತದೆ. ಸದ್ಗ್ರಂಥಗಳು ನಮಗೆ ಕೆಲವು ಕ್ಷಣಗಳವರೆಗೆ ಭಗವತ್ ಸಮಕ್ಷಮತೆಯನ್ನು ನೀಡುತ್ತವೆ, ಮನಸ್ಸನ್ನು ದುರ್ವಿಚಾರಗಳಿಂದ ಪಾರುಗಾಣಿಸಿ ಸದ್ವಿಚಾರಗಳ ಭಂಡಾರವಾಗಿಸುತ್ತವೆ. ಸದ್ಗ್ರಂಥಗಳು ಆತ್ಮಪರೀಕ್ಷೆಗೆ ನೆರವಾಗುತ್ತವೆ. ಅವು ಕನ್ನಡಿಯ ಹಾಗೆ. ಅವು ನಮ್ಮ ಮನದ ದೋಷಗಳನ್ನು ತೋರಿಸಿಕೊಡುತ್ತವೆ. ವಿಷಯಚಿಂತನೆಗಳನ್ನು ಕ್ಷೀಣಗೊಳಿಸುತ್ತವೆ. ಧ್ಯಾನದಿಂದ ಚಿತ್ತ ಏಕಾಗ್ರವಾಗುತ್ತದೆ ಎನ್ನುವುದಾದರೆ ಸ್ವಾಧ್ಯಾಯದಿಂದ ಚಿಂತನ ಏಕಾಗ್ರತೆ ಸಾಧ್ಯವಾಗುತ್ತದೆ ಎನ್ನಬಹುದು. ನಾವು ಪ್ರಾರ್ಥನೆಯಿಂದ ಭಗವಂತನ ಹತ್ತಿರ ಹತ್ತಿರ ಹೆಜ್ಜೆಯನ್ನಿಡುತ್ತೇವೆ. ಭಗವಂತ ಸಂತವಾಣಿಯ ಮೂಲಕ, ಶಾಸ್ತ್ರವಾಣಿಯ ಮೂಲಕ ನಮ್ಮ ಬಳಿ ಸಾರಿ ನಮ್ಮ ಪ್ರಾರ್ಥನೆಗಳಿಗೆ ಉತ್ತರಿಸುತ್ತಾನೆ. ಧ್ಯಾನ-ಪ್ರಾರ್ಥನೆ ನಮ್ಮ ಕಡೆಯಿಂದ ಭಗವಂತನ ಕಡೆಗೆ ಹರಿಯುತ್ತದೆ. ಶಾಸ್ತ್ರವಾಣಿಗಳು, ಸದ್ಗ್ರಂಥಗಳು ಭಗವಂತನ ಸನ್ನುಡಿಗಳು. ನಮ್ಮ ಮೇಲಿನ ಅನುಕಂಪೆಯಿಂದ, ಅನುಗ್ರಹದೃಷ್ಟಿಯಿಂದ ಹೊರಹೊಮ್ಮಿದ ಅವನ ಧ್ವನಿ.

### ಸ್ವಾಧ್ಯಾಯದ ಮಹಿಮೆ

ಸದ್ಗ್ರಂಥಾಧ್ಯಯನದಿಂದ ಉಪಯೋಗವಾಗುವಂತೆ, ಅಸತ್ ಗ್ರಂಥಗಳ ಅಧ್ಯಯನವು ಹಾನಿಯನ್ನುಂಟುಮಾಡುತ್ತದೆ. ಸಾಧಕನಿಗೆ ಸಾಧನಾವಧಿಯಲ್ಲಿ ತಾನು ಹಿಂದೆ ಆಸಕ್ತಿಯಿಂದ ಓದಿದ ಅಸತ್ ಗ್ರಂಥಗಳ ಸ್ಮೃತಿಯು ಉದಿಸಿ ಮನಸ್ಸನ್ನು ವಿಕ್ಷಿಪ್ತಗೊಳಿಸುವುದನ್ನು ಕಂಡಾಗ ಈ ಮಾತಿನ ತಥ್ಯವು ಮನವರಿಕೆಯಾಗುತ್ತದೆ. ಸ್ವಾಧ್ಯಾಯವು ಎಷ್ಟು ಮುಖ್ಯ ವಿಚಾರವೋ ಅಸತ್ ಗ್ರಂಥಗಳನ್ನು ಓದಬಾರದು ಎಂಬುದು ಅಷ್ಟೇ ಮುಖ್ಯ ವಿಚಾರ. ಅನೇಕ ಸಾಧಕರು ಈ ವಿಚಾರದಲ್ಲಿ ಎಚ್ಚರಗೇಡಿಗಳಾಗಿದ್ದಾರೆ. ದುಷ್ಟ ಗ್ರಂಥಗಳಿಂದ ದೂರವಿರುವುದು ಸ್ವಾಧ್ಯಾಯದ ಮೊದಲ ಮೆಟ್ಟಿಲು.

ಅಶ್ಲೀಲ ಭಾವನೆಗಳನ್ನು ಕೆರಳಿಸುವಂತಹ ಗ್ರಂಥಗಳು ಬಹಳ ಹಾನಿಕರವಾದವುಗಳು. ಅವನ್ನು ಮುಟ್ಟಲೂ ಕೂಡದು. ಸಾಮಾಜಿಕ, ಶೃಂಗಾರ ಅಥವಾ ಕರುಣ ಸಾಹಿತ್ಯ ಅಥವಾ ಆ ಬಗೆಯ ಉಪನ್ಯಾಸ, ನಾಟಕ, ಕಥೆಗಳೂ ಸಾಧಕನಿಗೆ ಸಹಾಯಕವಾಗಲಾರವು. ರಾಜಕೀಯ ಗ್ರಂಥಗಳನ್ನು ಓದಿಯೂ ಅವನಿಗೆ ಏನೂ ಆಗಬೇಕಾಗಿಲ್ಲ. ಶ್ರೀರಾಮಕೃಷ್ಣರಿಗೆ ವಿಷಯವಾಸನೆಗಳನ್ನೇ ಹೊತ್ತು ತರುವ ವೃತ್ತಪತ್ರಿಕೆಗಳನ್ನು ಮುಟ್ಟಲೂ ಆಗುತ್ತಿರಲಿಲ್ಲ. ಇಂದಿನ ಸಮಾಜದಲ್ಲಿ ನೈತಿಕ ಜೀವನದ ಅಧಃಪತನದಿಂದ ಅಂತಹ ಸಮಾಚಾರಗಳಿಂದಲೇ ತುಂಬಿದ ವೃತ್ತಪತ್ರಿಕೆಗಳ ಓದುವಿಕೆಯು ಸಾಧಕನಿಗೆ ಖಂಡಿತವಾಗಿ ವಿಕ್ಷೇಪಕಾರಕವೇ ಸರಿ.

ಶಾಸ್ತ್ರೀಯ, ಗ್ರಾಹ್ಯ ಮತ್ತು ಉಪಾದೇಯ ಸಾಹಿತ್ಯದಲ್ಲೂ ಎರಡು ಬಗೆಗಳು. ಸಿದ್ಧಾಂತವನ್ನು ಪ್ರತಿಪಾದಿಸಲು ಇರುವ ಸಾಹಿತ್ಯದಲ್ಲಿ ಯುಕ್ತಿ ಅಥವಾ ತರ್ಕದ ಪ್ರಾಧಾನ್ಯತೆ ಇರುತ್ತದೆ. ಅದನ್ನು ವಾದ ಎಂದು ಕರೆಯುತ್ತಾರೆ. ಸಿದ್ಧಾಂತವನ್ನು ಕಂಡುಕೊಂಡ ತರುವಾಯ ಅದನ್ನು ಸಾಕ್ಷಾತ್ಕರಿಸಿಕೊಳ್ಳಲು, ದೃಢಪಡಿಸಿಕೊಳ್ಳಲು ಇರುವ ಶಾಸ್ತ್ರವನ್ನು ಸಿದ್ಧಾಂತ ಎಂದು ಕರೆದಿದ್ದಾರೆ. ಪ್ರಾರಂಭದಲ್ಲಿ ಜೀವನದ ಗುರಿಯನ್ನು, ಸಾಧನಾಮಾರ್ಗವನ್ನು ನಿರ್ಧರಿಸಲು ವಾದ ಬೇಕಾಗುತ್ತದೆ. ಮುಂದೆ ಸಂಶಯಗಳು ಏಳದಂತೆ ಅವನು ಒಂದು ವಿಷಯವನ್ನು ಎಲ್ಲ ದೃಷ್ಟಿಗಳಿಂದ ಆಲೋಚನೆ ಮಾಡಬೇಕು. ಆದರೆ ಒಂದು ಸಲ ಸಿದ್ಧಾಂತವನ್ನು ನಿರ್ಧರಿಸಿದ ತರುವಾಯ ವಾದದ ಅಗತ್ಯವಿರದು. ಆಗ ಅದು ಸಾಧನೆಗೆ ಬಾಧಕವೂ ಆಗಬಹುದು.

ಸಾಧಕನಿಗೆ ೧) ಆತ್ಮ ಮತ್ತು ಪರಮಾತ್ಮನ ಸ್ವರೂಪವನ್ನು ತಿಳಿಯಪಡಿಸುವ ಮತ್ತು ಭಕ್ತಿಯನ್ನು ಪರಿಪುಷ್ಟಗೊಳಿಸುವ ಗ್ರಂಥಗಳು. ೨) ಸಾಧನಾಮಾರ್ಗವನ್ನು ತಿಳಿಯಪಡಿಸುವ ಗ್ರಂಥಗಳು, ಮತ್ತು ೩) ಸಂಸಾರಬಂಧನದ ಸ್ವರೂಪವನ್ನು ತಿಳಿಯಪಡಿಸಿ ಅದರಿಂದ ಪಾರಾಗುವ ಉಪಾಯವನ್ನು ಹೇಳುವ ಗ್ರಂಥಗಳು-ಅತ್ಯಂತ ಉಪಯುಕ್ತವಾದವುಗಳು. ಸಾಧುಸಂತರ ಜೀವನ ಚರಿತ್ರೆಗಳೂ ಈ ದೃಷ್ಟಿಯಿಂದ ಮಾರ್ಗದರ್ಶಕಗಳು.

ಅನೇಕ ಭಕ್ತರು ನಿಯಮಿತವಾಗಿ ಭಗವದ್ಗೀತೆ, ಭಾಗವತ ಇತ್ಯಾದಿ ಗ್ರಂಥಗಳನ್ನು ಪಾರಾಯಣ ಮಾಡುತ್ತಾರೆ. ಅದು ಒಳ್ಳೆಯ ಅಭ್ಯಾಸ. ಆದರೆ ಅಭ್ಯಾಸವು ಕೆಲವೊಮ್ಮೆ ಯಾಂತ್ರಿಕವಾಗುತ್ತದೆ. ಅದರಿಂದ ಅಂತಹ ಉಪಯೋಗವಾಗಲಾರದು. ಏಕಾಗ್ರತೆಯಿಂದ ಕೂಡಿ, ಆಳವಾದ ಮನನಪೂರ್ವಕ ಮಾಡುವ ಅಧ್ಯಯನವು ಫಲಕಾರಿಯಾಗುವಂಥದ್ದು. ನಾವು ಅನೇಕ ಧರ್ಮಗ್ರಂಥಗಳನ್ನು ಓದಬೇಕೆಂದೂ ಅಲ್ಲ, ಒಂದು ಗ್ರಂಥವನ್ನು ಅರ್ಥವರಿತು ಏಕಾಗ್ರತೆಯಿಂದ ಓದುವುದರಿಂದ ಅಧಿಕ

ಲಾಭವಾಗುತ್ತದೆ. ಅಷ್ಟೇ ಅಲ್ಲ, ಸಾಧಕ ಮುಂದುವರಿದಂತೆ ಒಂದು ಗ್ರಂಥದ ಒಂದು ಅಧ್ಯಾಯವೇ ಅವನ ಇಡೀ ಜೀವನಕ್ಕೆ ಸಾಕು ಎನ್ನಿಸುತ್ತದೆ. ಕೆಲವೊಮ್ಮೆ ಒಂದು ಶ್ಲೋಕ, ಸ್ವಾಮೀಜಿಯವರ ಕೆಲವು ನುಡಿಗಳು, 'ವಚನವೇದ'ದ ಒಂದೆರಡು ಪುಟಗಳು ಅವನ ಇಡೀ ಜೀವನಕ್ಕೆ ಚಿಂತನೆಯ ವಸ್ತುವಾಗುತ್ತವೆ. ಸ್ವಾಮಿ ತುರೀಯಾನಂದರು ಗೀತೆಯ ಒಂದೊಂದು ಶ್ಲೋಕವನ್ನು ಹಲವು ದಿನ, ಹಲವು ವಾರ ಧ್ಯಾನಿಸುತ್ತಿದ್ದರು. ಸಾಧಕನ ಸ್ವಾಧ್ಯಾಯದ ಗುರಿ ವಿಸ್ತಾರವಾದ ಅಧ್ಯಯನಶೀಲತೆಯನ್ನು ಹರಡಿಕೊಳ್ಳುವುದಲ್ಲ, ತತ್ತ್ವದ ತಲಸ್ಪರ್ಶಗೈಯುವುದು.

ಆಳವಾದ ಅಧ್ಯಯನಗೈಯುವುದರಲ್ಲಿ ಲೇಖನಗಳ ರಚನೆ, ಲೇಖನಗಳ ಅನುವಾದ ಮತ್ತು ಲೇಖನದ ಮುಖ್ಯಾಂಶಗಳನ್ನು ಬರೆಯುವುದು ಸಹಾಯಕರವಾದುದು. ಆಗ ಮನಸ್ಸನ್ನು ಅಧಿಕ ಏಕಾಗ್ರಗೊಳಿಸಬೇಕಾಗುತ್ತದೆ. ಪ್ರತಿಯೊಂದು ಶಬ್ದವನ್ನು ಆಳವಾಗಿ ಚಿಂತೆಗೈಯದೆ ಸರಿಯಾದ ಅನುವಾದವು ಹೊರಬರಲಾರದು. ಗೀತೆಯ ಶ್ಲೋಕವನ್ನು ಓದಿ, ಬರೆದು ತೆಗೆದರೆ ಅಲ್ಲಿ ಹೆಚ್ಚಿನ ಏಕಾಗ್ರತೆಯು ಬರುತ್ತದೆ. ಲೇಖನ ರಚನೆಯಲ್ಲಿ ತನ್ನ ವಿಚಾರಗಳಿಗೆ ಸುಸಂಬದ್ಧ ರೂಪ ಕೊಡಲು ಹೆಚ್ಚು ಚಿಂತನೆ ಬೇಕಾಗುತ್ತದೆ.

ನಾವು ಒಂದು ಗ್ರಂಥವನ್ನು ಮನಸ್ಸಿನಲ್ಲೆ ಓದಿದರೆ ಆಗ ನಮ್ಮ ಕಣ್ಣು ಮತ್ತು ಮನಸ್ಸು ಮಾತ್ರ ಕೆಲಸ ಮಾಡುತ್ತವೆ. ಓದುವಾಗ ನಾವು ಆಯಾ ಶಬ್ದಗಳ ಮೇಲೆ ಬೆರಳು ಇರಿಸಿ, ಗಟ್ಟಿಯಾಗಿ ಓದಿದರೆ ಕಣ್ಣು, ನಾಲಗೆ, ಕಿವಿ, ಚರ್ಮ(ಎಂದರೆ ಬೆರಳು) ಮತ್ತು ಮನಸ್ಸು – ಹೀಗೆ ಸರ್ವೇಂದ್ರಿಯಗಳನ್ನು ಅಧ್ಯಯನದಲ್ಲಿ ತೊಡಗಿಸಿದಂತಾಗುತ್ತದೆ.

ಕೆಲವರಿಗೆ ಒಂದೇ ವಿಷಯಕ್ಕೆ ಸಂಬಂಧಪಟ್ಟ ವಿಚಾರಗಳನ್ನು ವಿವಿಧ ಗ್ರಂಥಗಳಿಂದ ಆಯ್ದು ಸಂಗ್ರಹಿಸುವುದರಲ್ಲಿ ಆಸಕ್ತಿ. ಧ್ಯಾನ, ಶರಣಾಗತಿ, ತ್ಯಾಗ, ಸೇವೆ ಇತ್ಯಾದಿ ಕುರಿತಾಗಿ ಸಂತಮಹಾತ್ಮರ ವಾಣಿಗಳು. ವಿವಿಧ ಧರ್ಮಗ್ರಂಥಗಳ ನುಡಿಗಳು – ಇವನ್ನು ಒಂದೆಡೆ ಬರೆದಿಡುವುದು ಒಂದು ಆರೋಗ್ಯಕರ ಹವ್ಯಾಸ. ಅವನ್ನು ನಾವು ಕೂಡಲೇ ಜೀವನದಲ್ಲಿ ಪಾಲಿಸಲಾಗದಿದ್ದರೂ ಅವುಗಳಿಂದ ಮನಸ್ಸಿನಲ್ಲೊಂದು ಸತ್‌ಸಂಸ್ಕಾರ ನಿರ್ಮಾಣವಾಗುತ್ತದೆ. ಸ್ವಾಧ್ಯಾಯದ ಉದ್ದೇಶವೂ ಇದೇ ಆಗಿದೆ.

ಸ್ವಾಧ್ಯಾಯವನ್ನು ಒಬ್ಬರೇ ಮಾಡಬಹುದು; ಇಬ್ಬರು, ಮೂವರು ಅಥವಾ ಹೆಚ್ಚಿನವರು ಸೇರಿ ಮಾಡಬಹುದು. ಇವುಗಳಲ್ಲಿ ಪ್ರತಿಯೊಂದಕ್ಕೂ ತಮ್ಮದೇ ಆದ ಮಹತ್ವವಿದೆ. ಭಗವಂತನೊಂದಿಗೆ ಬಾಂಧವ್ಯವನ್ನು ಬೆಳೆಸಿಕೊಳ್ಳಲು ಏಕಾಂತ ಅಧ್ಯಯನವು ಬೇಕೆನ್ನಿಸಬಹುದು. ಕೆಲವೊಮ್ಮೆ ಒಂದು ವಿಷಯವನ್ನು ಇಬ್ಬರು ಅಥವಾ ಮೂವರೊಂದಿಗೆ ಚರ್ಚಿಸಿ ಸ್ಪಷ್ಟೀಕರಣವನ್ನು ಬಯಸುತ್ತೇವೆ. ಅಥವಾ ಸಂಘಟಿತ ಸ್ವಾಧ್ಯಾಯದಿಂದ ಭಕ್ತಿಯ ವಾತಾವರಣವನ್ನು ನಿರ್ಮಾಣ ಮಾಡಬಯಸುತ್ತೇವೆ. ಕೆಳಮುಖವಾಗಿ ಹರಿಯುವ ಮನಸ್ಸು ವೈಯಕ್ತಿಕ ಪ್ರಯತ್ನದಿಂದ ಮೇಲ್ಮುಖವಾಗದಿದ್ದಾಗ ಸಾಮೂಹಿಕ ಸತ್ಸಂಗ, ಭಜನೆಯಿಂದ, ಭಕ್ತರೊಡನೆ ಸೇರಿ ಮಾಡುವ ಸ್ವಾಧ್ಯಾಯದಿಂದ ಮನಸ್ಸಿನ ಚಂಚಲತೆಯನ್ನು ದೂರ ಮಾಡಿ ಸ್ಥಿರವಾಗಿಸಬಹುದು. ಶಾಸ್ತ್ರಗಳನ್ನು ಇನ್ನೊಬ್ಬರಿಗೆ ವಿವರಿಸಿ ಹೇಳುವುದರಿಂದಲೂ ಸಹಾಯವಾಗುತ್ತದೆ. ಆದರೆ ಅವನ ಉದ್ದೇಶ ಕೇವಲ ಅಧ್ಯಾಪನವಾಗಬಾರದು, ತನ್ನ ಅಧ್ಯಯನ ಮತ್ತು ಆಧ್ಯಾತ್ಮಿಕ ಉನ್ನತಿಯೇ ಅವನ ಗುರಿಯಾಗಿರಬೇಕು.

### ಅಪಾಯಗಳಿವೆ, ಎಚ್ಚರ !

ಪ್ರತಿಯೊಂದು ಸಾಧನಾಮಾರ್ಗದಲ್ಲಿ ನಾವು ಕೆಲವು ಎಚ್ಚರಿಕೆಗಳನ್ನು ವಹಿಸಬೇಕಾಗುತ್ತದೆ. ಸ್ವಾಧ್ಯಾಯದ ಗುರಿಯನ್ನು ನಾವು ಯಾವಾಗಲೂ ನೆನಪಿಟ್ಟುಕೊಂಡಿರಬೇಕು. ಮನಶ್ಶುದ್ಧಿಯೊಂದಿಗೆ ಉನ್ನತ ಚಿಂತನೆ, ತನ್ಮೂಲಕ ಸಾಕ್ಷಾತ್ಕಾರಲಾಭದೆಡೆ ಹೆಜ್ಜೆಯಿಡುವುದು. ಈ ಗುರಿಯನ್ನು ಮರೆತರೆ ಸ್ವಾಧ್ಯಾಯವು ವ್ಯಸನಕ್ಕೆ ತಿರುಗಿಕೊಳ್ಳುತ್ತದೆ, ವಾಸನೆಯಾಗುತ್ತದೆ. ಅನೇಕ ಗ್ರಂಥಗಳನ್ನು ಓದಬೇಕೆಂಬ ವಾಸನೆಯನ್ನು ಶಾಸ್ತ್ರೈಷಣ ಎಂದು ಕರೆದಿದ್ದಾರೆ. ಅನೇಕ ಸಾಧಕರು ಇದಕ್ಕೆ ಬಲಿಯಾಗಿರುತ್ತಾರೆ. ಅವರು ಒಂದರ ಮೇಲೊಂದರಂತೆ ಗ್ರಂಥಗಳನ್ನು ಓದುತ್ತಲೇ ಇರುತ್ತಾರೆ. ಅವರ ಜಿಜ್ಞಾಸೆ ಮುಗಿಯುವುದೇ ಇಲ್ಲ. ಅದು ಅವರಿಗೆ ಬೌದ್ಧಿಕ ಆನಂದವನ್ನು ಕೊಡುತ್ತದೆ. ಇನ್ನೊಬ್ಬರಿಗೆ ಬೋಧನೆ ಮಾಡಬೇಕು, ಇನ್ನೊಬ್ಬರನ್ನು ಉದ್ಧರಿಸಬೇಕೆಂಬ ವಾಸನೆಯೂ ಹೊಸ ಹೊಸ ಗ್ರಂಥಗಳನ್ನು ಓದುವಂತೆ ಮಾಡುತ್ತದೆ. ಅಧ್ಯಯನವನ್ನು ಮಾಡುವಾಗ ಈ ಮಾತು ಚೆನ್ನಾಗಿದೆ, ಇದನ್ನು ಇನ್ನೊಬ್ಬರಿಗೆ ಹೇಳಬೇಕು ಎನ್ನಿಸುತ್ತಿದ್ದರೆ ಅವನು ಗುರಿಯಿಂದ ವಿಮುಖನಾಗಿದ್ದಾನೆ ಎಂದರ್ಥ. ಶ್ರೀರಾಮಕೃಷ್ಣರು ತನ್ನನ್ನು ಕೊಂದುಕೊಳ್ಳಲು ಒಂದು ಸೂಜಿ ಸಾಕು, ಇತರರನ್ನು ಕೊಲ್ಲಲು ಕತ್ತಿ , ಖಡ್ಗ, ಭರ್ಜಿ ಎಲ್ಲ ಬೇಕಾಗುತ್ತದೆ — ಎಂದು ಹೇಳುತ್ತಿದ್ದರು. ಅಂತೆಯೇ ಪರೋಪದೇಶಕ್ಕಾಗಿ, ಪಾಂಡಿತ್ಯ ಪ್ರದರ್ಶನಕ್ಕಾಗಿ ಬಹಳಷ್ಟು ಶಾಸ್ತ್ರಗ್ರಂಥಗಳ ಅಧ್ಯಯನದ ಆವಶ್ಯಕತೆಯಿದೆ. ತನ್ನನ್ನು ಉದ್ಧರಿಸಿಕೊಳ್ಳಲು ಒಂದು ಗ್ರಂಥ, ಒಂದು ಶ್ಲೋಕ, ಕೆಲವು ವಾಕ್ಯಗಳು ಸಾಕು.

ತಾತ್ಪರ್ಯವೆಂದರೆ ಸ್ವಾಧ್ಯಾಯದಲ್ಲಿ ಅತಿ ಮಾಡಲು ಹೋಗಬಾರದು, ಎಷ್ಟು ಬೇಕೋ ಅಷ್ಟೇ. ಅತಿ ಚಂಚಲವಾದ, ಧ್ಯಾನಕ್ಕೆ ಶೀಲವಾಗಲು ಸಿದ್ಧವಿಲ್ಲದ, ಏಕಾಗ್ರತೆಯಿಲ್ಲದ ಮನಸ್ಸನ್ನು ಇನ್ನೂ ತಮೋಗುಣಕ್ಕಿಳಿಯದಂತೆ ತಡೆಯಲು ಸ್ವಾಧ್ಯಾಯ–ಅಧ್ಯಯನ–ಪಾರಾಯಣವು ಬೇಕು. ಅದರಿಂದ ಮನಸ್ಸು ಆಧ್ಯಾತ್ಮಿಕ ಸ್ತರಕ್ಕೇರದಿದ್ದರೂ, ಭೌತಿಕ ಅಥವಾ ದೇಹದ ಸ್ತರಕ್ಕೆ ಕುಸಿಯದೆ, ಬೌದ್ಧಿಕ ಸ್ತರದಲ್ಲಿ ನೆಲೆಸುವಂತಾಗುತ್ತದೆ.



# ಹನುಮಂತನ ಬಗ್ಗೆ ಸ್ವಾಮೀಜಿ

**ಶಿಷ್ಯ :** ನಾವೀಗ ಯಾವ ಗುರಿಯನ್ನು ಅನುಸರಿಸಬೇಕು?

**ಸ್ವಾಮೀಜಿ:** ಮಹಾವೀರನನ್ನು ನಮ್ಮ ಗುರಿಯಾಗಿಟ್ಟುಕೊಳ್ಳಬೇಕು. ರಾಮಚಂದ್ರನ ಅಣತಿಯಂತೆ ಅವನು ಹೇಗೆ ಸಮುದ್ರವನ್ನೇ ದಾಟಿದ! ಅವನಿಗೆ ಜೀವನ ಮರಣ ಯಾವುದರ ಮೇಲೂ ಗಮನ ವಿರಲಿಲ್ಲ. ಅವನು ಇಂದ್ರಿಯಗಳನ್ನು ಸಂಪೂರ್ಣವಾಗಿ ತನ್ನ ವಶ ದಲ್ಲಿಟ್ಟುಕೊಂಡಿದ್ದ, ತೀಕ್ಷ್ಣಮತಿಯಾಗಿದ್ದ. ನೀವೀಗ ಈ ಸೇವೆಯ ಮಹೋದ್ದೇಶದ ಮೇಲೆ ನಿಮ್ಮ ಜೀವನವನ್ನು ಕಟ್ಟಬೇಕು. ಅದರ ಮೂಲಕ ಇತರ ಎಲ್ಲಾ ಉದ್ದೇಶಗಳೂ ಕ್ರಮೇಣ ವಿಕಸಿಸುವುವು. ಮರುಮಾತಿಲ್ಲದೆ ಗುರುಮಾತಿಗೆ ವಿಧೇಯರಾಗಿ ನಡೆಯುವುದು, ಮತ್ತು ಬ್ರಹ್ಮಚಾರಿ ಜೀವನ ನಡೆಸುವುದು, ಇದೇ ಜಯದ ರಹಸ್ಯ. ಹನುಮಂತ ಒಂದು ಕಡೆ ಸೇವೆಯ ಮಹೋದ್ದೇಶವನ್ನು ಇನ್ನೊಂದು ಕಡೆ ಇಡೀ ಜಗತ್ತೇ ಬೆರಗಾಗುವಂತಹ ಸಿಂಹಸದೃಶ ಧೈರ್ಯವನ್ನು ಪ್ರಕಟಿಸುತ್ತಾನೆ. ರಾಮನ ಕಲ್ಯಾಣಕ್ಕಾಗಿ ಪ್ರಾಣವನ್ನೇ ಅರ್ಪಿಸಲು ಅವನು ಸ್ವಲ್ಪವೂ ಅನುಮಾನಿಸಲಿಲ್ಲ. ರಾಮನ ಸೇವೆಯ ಹೊರತು ಉಳಿದುದರಲ್ಲೆಲ್ಲ ಅವನಿಗೆ ತಾತ್ಸಾರ. ಬ್ರಹ್ಮ ಶಿವ ಮುಂತಾದ ಈ ಜಗತ್ತಿನ ದೇವತೆಗಳ ಪದವಿಯೆಲ್ಲಾ ಅವನಿಗೆ ನಿಸ್ಸಾರ. ಶ್ರೀರಾಮನ ಅಣತಿಯಂತೆ ನಡೆಯುದೊಂದೇ ಅವನ ಜೀವನದ ವ್ರತ. ಅಂತಹ ಹೃತ್ಪೂರ್ವಕ ಭಕ್ತಿ ಬೇಕಾಗಿದೆ.

*( ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ. ೮, ಪು.೨೨೮-೨೯))*



**ಶಿಷ್ಯ :** 'ಕೆಲವರು ಭಗವಂತನನ್ನು ಅರಸುತ್ತಾರೆ ; ಆದರೆ ಅವರಿಗೆ ಸಿಗಲಾರ. ಇನ್ನು ಕೆಲವರು ಅರಸುವು ದಿಲ್ಲ, ಆದರೆ ಅವರಿಗೆ ಸಿಗುತ್ತಾನೆ' ಈ ಮಾತಿನ ಅರ್ಥವೇನು?

**ಶ್ರೀಮಾತೆ :** ಈಶ್ವರನಿಗೆ ಬಾಲಕನ ಸ್ವಭಾವ ತಾನೆ? ಯಾರಿಗೆ ಬೇಕಾಗಿದೆಯೋ ಅವನಿಗೆ ಸಿಗಲಾರ ; ಯಾರಿಗೆ ಬೇಡವೋ ಅವನಿಗೆ ಒತ್ತಾಯಿಸಿ ಕೊಡುತ್ತಾನೆ. ಬಹುಶಃ ಅವನು ಪೂರ್ವಜನ್ಮದಲ್ಲಿ ಸಾಕಷ್ಟು ಪುಣ್ಯ ಮಾಡಿರಬೇಕು, ಆದ್ದರಿಂದಲೇ ಅವನ ಮೇಲೆ ಕೃಪೆಯಾಗುವುದು.

**ಶಿಷ್ಯ :** ಹಾಗಿದ್ದರೆ ಕೃಪೆಯ ವಿಷಯದಲ್ಲೂ ತಾರತಮ್ಯ ಭಾವವಿದೆಯೆ ?

**ಶ್ರೀಮಾತೆ :** ಹೌದು, ಇದೆಯಲ್ಲ. ಯಾರ ಕರ್ಮ ಎಂಥದೋ ಅದಕ್ಕನುಸಾರವಾಗಿ ಎಲ್ಲವೂ ಇರುತ್ತದೆ. ಕರ್ಮ ಗಳೆಲ್ಲ ಅಳಿದು ಹೋದಾಗಲೇ ಭಗವಂತನ ದರ್ಶನವಾಗುವುದು. ಅದೇ ಅವನಿಗೆ ಕೊನೆಯ ಜನ್ಮ.

**ಶಿಷ್ಯ :** ಅಮ್ಮಾ, ಜ್ಞಾನ, ಚೈತನ್ಯವುಂಟಾಗಲು ಸಾಧನೆ, ಕರ್ಮ ಕ್ಷಯ, ತಕ್ಕ ಸಮಯ ಇತ್ಯಾದಿಗಳು ಅಗತ್ಯವೆಂಬುದೇನೋ ನಿಜ. ಆದರೆ ಭಗವಂತ ನಮ್ಮವನೇ ಎಂದಾದರೆ, ಅವನು ಇಚ್ಛೆ ಮಾತ್ರ ದಿಂದ ದರ್ಶನ ನೀಡಲಾರನೆ?

**ಶ್ರೀಮಾತೆ :** ಸರಿಯಾದ ಮಾತು. ಆದರೆ ಈ ಸೂಕ್ಷ್ಮವನ್ನು ನೀನು ಗ್ರಹಿಸಿರುವಂತೆ ಬೇರೆ ಯಾರು ಗ್ರಹಿಸಿದ್ದಾರೆ ಹೇಳು? ಎಲ್ಲರೂ ಏನೋ ಒಂದನ್ನು ಮಾಡಬೇಕು ಅಂತ ಏನೇನೋ ಮಾಡುತ್ತಿದ್ದಾರೆ. ನಿಜವಾಗಿಯೂ ಎಷ್ಟು ಮಂದಿಗೆ ಭಗವಂತ ಬೇಕಾಗಿದ್ದಾರೆ?

**ಶಿಷ್ಯ :** ನಿಮಗೆ ಹಿಂದೆ ಒಂದು ಬಾರಿ ನಾನು ಹೇಳಿದ್ದೆ, ಮಗು ವಿಗೆ ಒಂದು ವೇಳೆ ತನ್ನ ತಾಯಿಯ ಸ್ನೇಹ, ಪ್ರೀತಿಗಳು ದೊರಕ ದಿದ್ದರೆ ಅದು ತನ್ನ ತಾಯಿಯನ್ನು 'ಅಮ್ಮಾ' ಎಂದು ಕೂಗಲೂ ಅರಿಯದು ಅಂತ.

**ಶ್ರೀಮಾತೆ :** ಅದೇನೋ ನಿಜ. ಭಗವಂತನನ್ನು ನೋಡದಿದ್ದರೆ ಅವನ ಮೇಲೆ ಪ್ರೀತಿ ಉಂಟಾಗುವುದಾದರೂ ಹೇಗೆ ? ಈಗ ನಿನ್ನನ್ನು ನೋಡಿದ್ದಾಗಿದೆ — ಹಾಗಾಗಿ ನಾನು ನಿನ್ನ ತಾಯಿ, ನೀನು ನನ್ನ ಮಗ.

*('ಶ್ರೀಶಾರದಾದೇವಿ ವಚನವೇದ', ಪು. ೧೮೩-೮೪)*